Total No. of Questions : 55 ]

**Code No. 01**

Total No. of Printed Pages : 7 ]

**June/July, 2010**

# KANNADA

Time : 3 Hours 15 Minutes ] [ Max. Marks : 100

## ಅ- ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ದಾಸಿಮಯ್ಯನ ವಚನಗಳ ಅಂಕಿತ ಯಾವುದು ?

2) ಆದಿಕೇಶವನ ಧ್ಯಾನವನ್ನು ಏತಕ್ಕಾಗಿ ಮಾಡಬೇಕು ?

3) ಶಿಲುಬೆ ಯಾವುದರಿಂದಾಗಿದೆ ?

4) ಅಪ್ಪ ಗೊಣಗಲು ಕಾರಣವೇನು ?

5) ಗಂಡನು ಜೊಹರಾಗೆ ತಲಾಖ್ ನೀಡಿ ಈಗ ಎಷ್ಟು ತಿಂಗಳಾಯಿತು ?

6) ನ್ಯೂಯಾರ್ಕ್ ಪಟ್ಟಣವನ್ನು ಲೇಖಕರು ಏನೆಂದು ಕರೆದಿದ್ದಾರೆ ?

7) ರೋಗಿಷ್ಟ ಮೂಳೆ ಮಜ್ಜೆಯನ್ನು ಕಣಕಣವಾಗಿ ಕೊಲ್ಲಲು ಯಾವ ಚಿಕಿತ್ಸೆ ನೀಡಲಾಯಿತು ?

8) ಹಾಡುಗಾರರು ಕಾಡಿನ ಹೂವೆಂದು ಯಾರನ್ನು ಕರೆಯುವರು ?

9) ಶಬ್ದವೇಧಿ ಎಂದರೇನು ?

10) ಪಾಂಡವರ ಎಲ್ಲಾ ಅಪಮಾನಗಳಿಗೆ ಕೊನೆ ಯಾವುದು ?

[ Turn over

## ಆ – ವಿಭಾಗ

II. ಅ) ಕೆಳಗಿನ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

11) ಭೀಮನು ಯಾವಯಾವುದರ ಸವಿಯನ್ನು ನೋಡಿರುವುದಾಗಿ ಹೇಳುತ್ತಾನೆ ?

12) ಹೊಟ್ಟೆಪಾಡಿಗಾಗಿ ರೈತರು ಮತ್ತು ರಾಜರು ಏನು ಮಾಡುತ್ತಾರೆ ?

13) ಕಪ್ಪು ಶ್ರೇಷ್ಠ ಎಂದು ಪೂರ್ವಾಂಗನೆ ಹೇಗೆ ಸಾಬೀತುಪಡಿಸುತ್ತಾಳೆ ?

14) ಪಾಂಡವರನ್ನು ಕುಕ್ಕುತ್ತಿರುವವಳು ಯಾರು ? ಅವಳ ಕೆಲಸವೇನು ?

15) ಪೆಟ್ರೊಮ್ಯಾಕ್ಸ್ ಹೊತ್ತವರನ್ನು ಕವಿ ಹೇಗೆ ಪರಿಚಯಿಸುತ್ತಾರೆ ?

ಆ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

16) ಸಂಪಿಗೆ ಮರದ ಅಡಿಯಿಂದ ಕುವೆಂಪು ಕುರ್ಚಿಯ ಸ್ಥಾನ ಬದಲಿಸಲು ಕಾರಣವೇನು ?

17) ವಸಾಹತೀಕರಣದ ಮೂಲ ಲಕ್ಷಣ ಯಾವುದು ?

18) ಅನಿಸ್ಸಾ ಆಯಾಲಳ ಲುಕೇಮೀಯಾ (ರಕ್ತದ ಕ್ಯಾನ್ಸರ್) ರೋಗದ ಚಿಕಿತ್ಸೆಗೆ ಇರುವ ಇನ್ನೊಂದು ಉಪಾಯ ಯಾವುದು ?

19) ಮಂತ್ರವಾದಿಯು ಸುಮಿತ್ರ ಸೆಟ್ಟಿಗೆ ಏನೆಂದು ಹೇಳಿದನು ?

ಇ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಏಕಲವ್ಯನನ್ನು ಗಾಳಣ್ಣ ಹೇಗೆ ಪರಿಚಯಿಸುತ್ತಾನೆ ?

21) ಕಲಿಯುವ ಕುತೂಹಲವನ್ನು ಏಕಲವ್ಯ ಹೇಗೆ ವ್ಯಕ್ತಪಡಿಸಿದ್ದಾನೆ ?

22) ದ್ರೋಣಾಚಾರ್ಯರೇ ತನ್ನ ಗುರುಗಳು ಎಂದು ಏಕಲವ್ಯ ಹೇಗೆ ಸಾಧಿಸಿದನು ?

23) ಕೃಷ್ಣನ ಬಗೆಗೆ ಅರ್ಜುನ ಯಾವ ಭಾವನೆ ಹೊಂದಿದ್ದಾನೆ ?

## ಇ – ವಿಭಾಗ

III. ಅ) ಕೆಳಗಿನ ಯಾವುದಾದರೂ **ಎರಡು** ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : $2 \times 3 = 6$

24) ಸಾರ್ದನಸ್ತ್ರಾದ್ರಿಯಂ ಸಾರ್ದ ಮಾರ್ತಾಂಡನಂತೆ.

25) ತನ್ನ ಕುಂದಿನೊಳು ಕುಂದುವಳು.

26) ಮಾಂಸದ ಕೂಡ ದಳ್ಳುರಿಯೂ ಹುಟ್ಟಿಕೊಂಡವು.

ಆ) ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ತಪ್ಪು ಯಾರೇ ಮಾಡಲಿ, ಶಿಕ್ಷೆ ಅನುಭವಿಸಬೇಕಾದವರು ಹೆಂಗಸರು.

28) ಈ ರಾಕ್ಷಸ ಇನ್ನದೆಷ್ಟು ಸೆಳೆದುಬಿಡುತ್ತಾನೋ ?

ಇ) ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ಲೋಕದಲ್ಲಿ ನಾನೀಗ ಅಸಹಾಯಕ.

30) ಶಕ್ತಿ ಇಲ್ಲದವರು ಕುಲದ ಹಿರಿಮೆಯ ಮೊರೆ ಹೋಗುತ್ತಾರೆ.

## ಈ - ವಿಭಾಗ

IV. ಅ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ಭೀಮನ ಸಿಂಹನಾದವು ಸರೋವರದ ಜೀವಜಂತುಗಳ ಮೇಲೆ ಉಂಟುಮಾಡಿದ ಪರಿಣಾಮವೇನು ?

32) ಅಳಿಮನದವನ ಭಕ್ತಿಗೆ ದಾಸಿಮಯ್ಯ ಕೊಟ್ಟ ದೃಷ್ಟಾಂತ ಯಾವುದು ?

33) ಮಾನವ ನಿಜವಾಗಿ ಮಾಡಬೇಕಾದದ್ದೇನು ? ಮಾಡುತ್ತಿರುವುದೇನು ? ಎಂಬುದನ್ನು ಕೀರ್ತನೆಯ ಹಿನ್ನೆಲೆಯಲ್ಲಿ ವಿವರಿಸಿ.

34) ಹೆಣ್ಣು ಮಗು ಹುಟ್ಟಿದಾಗ ತಂದೆ ತಾಯಿ ಹಾಗೂ ಬಂಧುವರ್ಗದವರ ಪ್ರತಿಕ್ರಿಯೆಗಳನ್ನು ವಿವರಿಸಿ.

ಆ) ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಕುವೆಂಪುರವರ ಧಾರ್ಮಿಕತೆ ಮತ್ತು ವೈಚಾರಿಕತೆಯನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?

36) ಧರ್ಮದ ನಿಯಮ ಪಾಲಿಸಲು ಪ್ರಕೃತಿ ವಿರುದ್ಧ ಹೋರಾಟ ಮಾಡುವ ಮನುಷ್ಯ ಪ್ರವೃತ್ತಿಯ ವಿಫಲತೆಯನ್ನು ವಿವರಿಸಿ.

37) ಅನಿಸ್ವಾಳ ರೋಗಕ್ಕೆ ಚಿಕಿತ್ಸೆ ಉಪಾಯ ಫಲಿಸಿದ ನಂತರ ಅಮೆರಿಕ ಪ್ರಜೆಗಳು ಹೇಗೆ ಪ್ರತಿಕ್ರಿಯಿಸಿದರು ?

ಇ) ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2 × 4 = 8

38) ಅಶ್ವತ್ಥಾಮ ಏಕಲವ್ಯನನ್ನು ಕಂಡು ಬೆಂಬಲಿಸಿ ಮಾತನಾಡಿ ಸಮಾಧಾನಪಡಿಸಿದುದನ್ನು ವಿವರಿಸಿ.

39) ಪರಂಪರಾಗತ ಲೋಕವ್ಯವಸ್ಥೆಯನ್ನು ಸಮರ್ಥಿಸಿ ಭೀಷ್ಮಾಚಾರ್ಯ ಹೇಳುವ ಮಾತುಗಳನ್ನು ವಿವರಿಸಿ.

40) ಪಾಂಡವರನ್ನು ಬೆಂಬಲಿಸಲು ಏಕಲವ್ಯ ನಿರಾಕರಿಸುವುದು ಏಕೆ ?

## ಉ – ವಿಭಾಗ

V. ಅ) ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ : 1 × 5 = 5

41) ಆಸೆಯೆಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ.

ಅಥವಾ

42) ಮುಗುದೆ ನಾಚಿಕೆಗೊಳೆ ಮುದ್ದಿಸಿ ತಿಳುಪದೆ
ಪಗೆ ಸಾಧಿಸಿ ಬಲ್ಮೆದೋರೆ
ಉಗುರೊಳು ಬಾಜಿಪ ಬೀಣೆಗೊನಕೆಗೊಂಬ
ಬಗೆಯೆನಿಪುದು ಭಾವಿಪೊಡೆ.

[ Turn over

ಆ) **ಭಾಷಾಭ್ಯಾಸ**

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಆರಕ್ಕೆ** ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ : $6 \times 2 = 12$

43) ಈ ಪದಗಳಿಗೆ ತತ್ಸಮಗಳನ್ನು ಬರೆಯಿರಿ :

ಬಸದಿ, ಕಂಬ.

44) ಈ ಪದಗಳ ಕ್ರಿಯಾಧಾತುಗಳನ್ನು ಬರೆಯಿರಿ :

ತಿಂದನು, ಕಂಡನು.

45) ಈ ಪದಗಳಲ್ಲಿನ ವಿಭಕ್ತಿಯನ್ನು ಬರೆಯಿರಿ :

ಮರಕ್ಕೆ, ಅರಸನೊಳ್.

46) ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :

ಭೃಂಗ, ರಕ್ತ.

47) ಈ ಪದಗಳಲ್ಲಿನ ಗುಣವಾಚಕಗಳನ್ನು ಬರೆಯಿರಿ :

ನಿಟ್ಟುಸಿರು, ಕರ್ಬೊಗೆ.

48) ದ್ವಿರುಕ್ತಿಗಳಿಗೆ ಎರಡು ಉದಾಹರಣೆ ಕೊಡಿ.

49) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಕೈಚಳಕ, ನಖಶಿಖಾಂತ.

ಇ) ಕೆಳಗಿನ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ : $1 \times 5 = 5$

50) ಗ್ರಂಥಾಲಯಗಳು

51) ರೈತರ ಸಮಸ್ಯೆಗಳು

ಈ) **ಪತ್ರಲೇಖನ**

ಈ ಕೆಳಗಿನ ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ : 1 × 4 = 4

52) ನಿಮ್ಮ ವಿದ್ಯಾಭ್ಯಾಸಕ್ಕಾಗಿ ಸಾಲ ಸೌಲಭ್ಯವನ್ನು ಕೋರಿ ಬ್ಯಾಂಕಿನ ಅಧಿಕಾರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

53) ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಆಗಮಿಸುವಂತೆ ನಿಮ್ಮ ಚಿಕ್ಕಮ್ಮನಿಗೆ ಪತ್ರವೊಂದನ್ನು ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ **ಒಂದನ್ನು** ವಿಸ್ತರಿಸಿ ಬರೆಯಿರಿ : 1 × 4 = 4

54) ಆಕಳು ಕಪ್ಪಾದ್ರೆ, ಹಾಲು ಕಪ್ಪೆ ?

55) ಹಲ್ಲು ಇದ್ದವನಿಗೆ ಕಡಲೆ ಇಲ್ಲ, ಕಡಲೆ ಇದ್ದವನಿಗೆ ಹಲ್ಲು ಇಲ್ಲ.